**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 318/2025 ಫ್ರಾ.ಸಾ –1**

**ಚಾ.ಸಾ – 7**

**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ತೀರ್ಥ ಪಿ ಎ |
| ತಂದೆಯ ಹೆಸರು | : | ಅಜಯ್ ಎ ಎ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಸಹಾಯಕ ಸಂರಕ್ಷಣಾದಿಕಾರಿ ಸಂಶೋದನಾ ವಿಭಾಗ ಮಡಿಕೇರಿ |
| ವಾಸ ಸ್ಥಳ | : | ಮಡಿಕೇರಿ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು 2019 ರಿಂದ 2022 ರ ತನಕ ಪೊನ್ನಂಪೇಟೆಯಲ್ಲಿ ವಲಯ ಅರಣ್ಯಾದಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 26.05.2020 ರಂದು ಈ ಪ್ರಕರಣಕ್ಕೆ ಸಂಬಂದಿಸಿದಂತೆ ವಲಯ ಅರಣ್ಯಾದಿಕಾರಿಗಳು ನಾಗರಹೊಳೆ ವನ್ಯಜೀವಿ ವಲಯ ಇವರು ಬೆ. 06.30 ಕ್ಕೆ ಉಪ ಅರಣ್ಯ ಸಂರಕ್ಷಣಾದಿಕಾರಿ ವಿರಾಜಪೇಟೆರವರಿಗೆ ಕರೆ ಮಾಡಿ ನಾಗರಹೊಳೆ ವನ್ಯಜೀವಿ ವಲಯದ ಗಡಿ ಭಾಗದಲ್ಲಿರುವ ಕೆ . ಬಾಡಗ ಗ್ರಾಮಕ್ಕೆ ಸೇರಿದ ಕೊಟ್ಟಂಗಡ ಶಶಿ ಎನ್ನುವವರ ತೋಟದಲ್ಲಿ ಒಂದು ಕಡವೆಯನ್ನು ಕಳ್ಳ ಬೇಟೆ ಆಡಿರುವುದಕ್ಕೆ ಸಂಬಂದಿಸಿದಂತೆ ಒಬ್ಬ ಆರೋಪಿಯನ್ನು ಬಂದಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕರೆಯ ಮೇರೆಗೆ ಉಪ ಅರಣ್ಯ ಸಂರಕ್ಷಣಾದಿಕಾರಿ ವಿರಾಜಪೇಟೆ ಹಾಗೂ ಉಪ ವಲಯ ಅರಣ್ಯಾದಿಕಾರಿ ಕುಟ್ಟ ಶಾಖೆ ಹಾಗೂ ಸಿಬ್ಬಂದಿಗಳೊಂದಿಗೆ ಬೆ. 08.00

ಗಂಟೆಗೆ ಸದರಿ ಸ್ಥಳಕ್ಕೆ ತೆರಳಿ ನೋಡಲಾಗಿ ಒಂದು ಕಡವೆ ಮೃತ ದೇಹವು ಕಂಡು ಬಂದಿರುತ್ತದೆ ಹಾಗೂ ಮೃತ ದೇಹವು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಿಂದ 15 ಮೀ ದೂರದಲ್ಲಿರುದು ಕಂಡು ಬಂದಿರುತ್ತದೆ. ನಾಗರಹೊಳೆ ವನ್ಯ ಜೀವಿ ವಲಯದ ಸಿಬ್ಬಂದಿಗಳು ಒರ್ವ ವ್ಯಕ್ತಿಯನ್ನು ಬಂದಿಸಿದ್ದು ಕಡವೆ ಬೇಟೆ ಯ ಬಗ್ಗೆ ವಿಚಾರಿಸಲಾಗಿ 1ನೇ ಆರೋಪಿ ಆತನ ಹೆಸರು ವಿಳಾಸ ತಿಳಿಸಿದ್ದು ಕಳೆದ ವರ್ಷದಿಂದ 4 ನೇ ಆರೋಪಿಯವರ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದು ದಿ. 25.05.2020 ರಂದು 4 ನೇ ಆರೋಪಿಯು ಸುಮಾರು ರಾತ್ರಿ 10 ಗಂಟೆಗೆ ನನ್ನ ಅಣ್ಣನಾದ 2 ಮತ್ತು 3ನೇ ಆರೋಪಿರು ನನ್ನನ್ನು ಕರೆದು ಒಂದು ಕೋವಿ ಹಾಗೂ 4 ಕಾಡುತೂಸುಗಳನ್ನು ನೀಡಿ ಪಕ್ಕದಲ್ಲಿರುವ ನಾಗರಹೊಳೆ ವನ್ಯ ಜೀವಿ ವಲಯದಲ್ಲಿ ಕಡವೆಯನ್ನು ಬೇಟೆ ಆಡಿಕೊಂಡು ಬರಲು ತಿಳಿಸಿರುತ್ತಾರೆ. ಅದರಂತೆ ನಾವು ಪಕ್ಕದಲ್ಲಿರುವ ಕೊಟ್ಟಂಡಗ ಶಶಿ ಎನ್ನುವವರ ತೋಟದಲ್ಲಿ ಕಡವೆ ಕಂಡು ಬಂದಿದ್ದು ನನ್ನ ಅಣ್ಣನಾದ 2 ನೇ ಆರೋಪಿ ಸುಮಾರು ರಾತ್ರಿ 11.45 ಕ್ಕೆ ಕಡವೆಗೆ ಗುಂಡು ಹೊಡೆದಿದ್ದು ಕಡವೆಯ ಮೃತದೇಹವನ್ನು ಹುಡುಕುವ ಸಂದರ್ಭದಲ್ಲಿ ನಾಗರಹೊಳೆ ವನ್ಯ ಜೀವಿ ವಲಯದ ಸಿಬ್ಬಂದಿಗಳು ನನ್ನನ್ನು ಬಂದಿಸಿದರು ಹಾಗೂ 2 ಮತ್ತು 3ನೇ ಆರೋಪಿತರು ರಾತ್ರಿ ಕತ್ತಲಲ್ಲಿ ಕೋವಿ ಸಮೇತ ಪರಾರಿಯಾಗಿರುತ್ತಾನೆಂದು ಹೇಳಿಕೆ ನೀಡಿರುತ್ತಾನೆ.

ಬಂದಿತ ಆರೋಪಿಯ ಹೇಳಿಕೆಯನ್ನು ಆಧರಿಸಿ ವಿರಾಜಪೇಟೆ ವಿಭಾಗದ ಉಪ ಸಂರಕ್ಷಣಾದಿಕಾರಿಗಳು ನಾಗರಹೊಳೆ ವನ್ಯ ಜೀವಿ ವಲಯದ ಸಹಾಯಕ ಸಂರಕ್ಷಣಾದಿಕಾರಿ, ನಾಗರಹೊಳೆ ವನ್ಯ ಜೀವಿ ವಲಯದ ಅರಣ್ಯಾದಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ 4 ನೇ ಆರೋಪಿಯ ಮನೆಗೆ ಹೋಗಿ ವಿಚಾರಿಸಲಾಗಿ ಅವರ ಪತ್ನಿಯು 4 ನೇಆರೋಪಿ ಮನೆಯಲ್ಲಿ ಇರುವುದಿಲ್ಲ ಹಾಗೂ ಮುಂಜಾನೆ ಚಿಕಿತ್ಸೆಗೆ ಮಂಗಳೂರಿಗೆ ತೆರಳಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ಕೋವಿಯ ಬಗ್ಗೆ

ವಿಚಾರಿಸಲಾಗಿ ಅವರ ಪತ್ನಿಯು ಕೋವಿಯ ದಾಖಲಾತಿಗಳನ್ನು ನೀಡಲು ನಿರಾಕರಿಸಿರುತ್ತಾರೆ. ಮುಂದುವರೆದು ಮೃತ ಕಡವೆಯ ಕಳೇಬರಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲು ಹುಣಸೂರು ವಿಭಾಗದ ಇಲಾಖಾ ವೈದ್ಯಾಧಿಕಾರಿ ಡಾ. ಮುಜೆಗುರ್ ರೆಹಮಾನ್ ಇವರಿಗೆ ವಿನಂತಿ ಮಾಡಿಕೊಂಡಾಗ ಅವರು ತಮ್ಮ ಕಾರ್ಯನಿರತ ವೇಳಾಪಟ್ಟಿಯಿಂದ ಬರಲು ಸಾಧ್ಯವಾಗುವುದಿಲ್ಲಎಂದು ತಿಳಿಸಿರುತ್ತಾರೆ. ಆದ್ದರಿಂದ ಕಡವೆಯ ಕಳೇಬರಹವನ್ನು ಕಾಯಲು 4 ಶಿಪ್ರಪಡೆ ಸಿಬ್ಬಂದಿಗಳನ್ನು ನೇಮಿಸಿ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆಂದು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಯಿತು. ಈ ಮಹಜರ್ ಅನ್ನು ಬೆ. 09.00 ರಿಂದ ರಾತ್ರಿ 10.00 ಗಂಟೆ ತನಕ ಮಾಡಲಾಯಿತು.

ಸಾಕ್ಷಿಯು ಪ್ರಾಥಮಿಕ ದೂರನ್ನು, ದಿ. 26.05.2020 ರಂದು ಕೊಟ್ಟಂಗಡ ಶಶಿಯವರ ಕಾಫಿ ತೋಟದಲ್ಲಿ ಮಾಡಿರುವ ಮಹಜರ್, ಆ ವೇಳೆ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ. ಪಿ 1 ರಿಂದ 3 ಎಂದು ಸಹಿಗಳನ್ನು ನಿ. ಪಿ. 1(ಎ) ಮತ್ತು ನಿ ಪಿ 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ದಿ. 27.05.2020 ರಂದು ಮರಣೋತ್ತರ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಮಾಡಿದ ಮಹಜರ್, ಮರಣೋತ್ತರ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ. ಪಿ 4 ಮತ್ತು 5 ಎಂದು ಸಹಿಗಳನ್ನು ನಿ. ಪಿ. 4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ